# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **599** |
| **ಸದಸ್ಯರ ಹೆಸರು** | : | **ಶ್ರೀ ಸುನೀಲ್ ವಲ್ಯಾಪುರ್ (ವಿಧಾನ ಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | : | **: 11.03.2025** |
| **ಉತ್ತರಿಸಬೇಕಾದ ಸಚಿವರು** | : | **ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು** |

| **ಕ್ರ ಸಂ** | **ಪ್ರಶ್ನೆಗಳು** | **ಉತ್ತರಗಳು** |
|---|---|---|
| ಅ) | ಸರ್ಕಾರವೂ ಪ್ರತಿ ಲೀಟರ್ ಗುಣಮಟ್ಟದ ಹಾಲಿಗೆ ನಿಗಧಿ ಪಡಿಸಿರುವ ಪ್ರೋತ್ಸಾಹಧನ ಎಷ್ಟು; | ರಾಜ್ಯ ಸರ್ಕಾರದಿಂದ ಪ್ರತಿ ಲೀಟರ್ ಗುಣಮಟ್ಟದ ಹಾಲಿಗೆ ರೂ.5/-ಗಳ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ. |
| ಆ) | ಪ್ರೋತ್ಸಾಹಧನ ವಿಳಂಭವಾಗುತ್ತಿರುವುದಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | 2024-25ನೇ ಸಾಲಿಗೆ ರೂ.1300.00 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದ್ದು ಸಂಪೂರ್ಣ ಅನುದಾನವನ್ನು ರಾಜ್ಯದ ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನ ಪಾವತಿಸಲಾಗಿದೆ.<br>ಬಾಕಿಯಿದ್ದ ಪ್ರೋತ್ಸಾಹಧನ ಪಾವತಿಗಾಗಿ ಹೆಚ್ಚುವರಿಯಾಗಿ ರೂ.200.00 ಕೋಟಿ ಅನುದಾನ ಬಿಡುಗಡೆ ಮಾಡಲಾಗಿತ್ತು, ಸದರಿ ಮೊತ್ತವನ್ನು ಸಹ ಪಾವತಿ ಮಾಡಲಾಗಿದೆ.<br>ಪ್ರಸಕ್ತ ಸಾಲಿಗೆ ಒಟ್ಟಾರೆ ರೂ.1500.00 ಕೋಟಿಗಳ ಅನುದಾನ ಒದಗಿಸಲಾಗಿದೆ.<br>2025-26 ನೇ ಸಾಲಿನ ಬಜೆಟ್‌ನಲ್ಲಿ ರಾಜ್ಯದ ಹಾಲು ಉತ್ಪಾದಕರಿಗೆ ಬಾಕಿಯಿರುವ ಪ್ರೋತ್ಸಾಹಧನವು ಸೇರಿದಂತೆ 2025-26 ನೇ ಸಾಲಿಗೆ ಪ್ರೋತ್ಸಾಹಧನ ಪಾವತಿಸಲು ರೂ.1700.00 ಕೋಟಿ ಅನುದಾನ ಮೀಸಲಿಡಲಾಗಿದೆ. |
| ಇ) | ಎಲ್ಲಾ ವರ್ಗದ ಹಾಲು ಉತ್ಪಾದಕರಿಗೆ ಎಷ್ಟು ತಿಂಗಳಗಳ ಪ್ರೋತ್ಸಾಹಧನ ಬಾಕಿ ಇದೆ? (ಜಿಲ್ಲಾವಾರು ಸಾಮಾನ್ಯ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಂಪೂರ್ಣ ಮಾಹಿತಿ ನೀಡುವುದು) | ಸಾಮಾನ್ಯ ವರ್ಗದ ಹಾಲು ಉತ್ಪಾದಕರಿಗೆ ಅಕ್ಟೋಬರ್ -2024 ರಿಂದ ಫೆಬ್ರುವರಿ-2025 ರವರೆಗೆ ರೂ.613.58 ಕೋಟಿ, ಪರಿಶಿಷ್ಟ ಜಾತಿಯ ಹಾಲು ಉತ್ಪಾದಕರಿಗೆ ಜನವರಿ-2025 ಮತ್ತು ಫೆಬ್ರುವರಿ-2025 ರ ಮಾಹೆಗಳಿಗೆ ರೂ.18.29 ಕೋಟಿ, ಮತ್ತು ಪರಿಶಿಷ್ಟ ಪಂಗಡದ ಹಾಲು ಉತ್ಪಾದಕರಿಗೆ ನವೆಂಬರ್-2024 ರಿಂದ ಫೆಬ್ರುವರಿ-2025 ರವರೆಗೆ ರೂ.24.20 ಕೋಟಿ ಪ್ರೋತ್ಸಾಹಧನ ಪಾವತಿಗೆ ಬಾಕಿ ಇರುತ್ತದೆ.(**ಅನುಬಂಧ-1**ರಲ್ಲಿ ಮಾಹಿತಿ ನೀಡಲಾಗಿದೆ.) |

ಸಂಖ್ಯೆ: ಪಸಂಮೀ 20 ಕಹಾಮ 2025

**(ಕೆ.ವೆಂಕಟೇಶ್)**
ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

# ಅನುಬಂಧ-1

## ಜಿಲ್ಲಾವಾರು ಪಾವತಿಗೆ ಬಾಕಿ ಇರುವ ಪ್ರೋತ್ಸಾಹಧನದ ವರ್ಗವಾರು ವಿವರ

(ರೂ.ಕೋಟಿಗಳಲ್ಲಿ)

| ಕ್ರ.ಸಂ | ಜಿಲ್ಲೆ | ಸಾಮಾನ್ಯವರ್ಗ | ಪ.ಜಾತಿ | ಪ.ಪಂ |
|---|---|---|---|---|
| 1 | ಬಾಗಲಕೋಟೆ | 6.17 | 0.15 | 0.13 |
| 2 | ಬಳ್ಳಾರಿ | 0.55 | 0.01 | 0.07 |
| 3 | ಬೆಳಗಾವಿ | 18.33 | 0.25 | 0.7 |
| 4 | ಬೆಂಗಳೂರುನಗರ | 28.95 | 1.36 | 1.54 |
| 5 | ಬೆಂಗಳೂರುಗ್ರಾಮಾಂತರ | 36.69 | 0.88 | 0.38 |
| 6 | ಬೀದರ್ | 1.91 | 0.19 | 0.49 |
| 7 | ಚಾಮರಾಜನಗರ | 14.15 | 0.89 | 0.88 |
| 8 | ಚಿಕ್ಕಬಳ್ಳಾಪುರ | 26.4 | 1.89 | 3.92 |
| 9 | ಚಿಕ್ಕಮಗಳೂರು | 8.93 | 0.41 | 0.09 |
| 10 | ಚಿತ್ರದುರ್ಗ | 10.08 | 0.29 | 1.06 |
| 11 | ದಕ್ಷಿಣಕನ್ನಡ | 15.65 | 0.18 | 0.94 |
| 12 | ದಾವಣಗೆರೆ | 16.45 | 0.69 | 1.33 |
| 13 | ಧಾರವಾಡ | 4.13 | 0.03 | 0.75 |
| 14 | ಗದಗ | 2.55 | 0.15 | 0.14 |
| 15 | ಹಾಸನ | 68.12 | 2.4 | 0.86 |
| 16 | ಹಾವೇರಿ | 9.36 | 0.34 | 0.74 |
| 17 | ಕಲಬುರಗಿ | 1.92 | 0.041 | 0.084 |
| 18 | ಕೊಡಗು | 1.04 | 0.019 | 0.025 |
| 19 | ಕೋಲಾರ | 41.68 | 2.49 | 2.63 |
| 20 | ಕೊಪ್ಪಳ | 3.78 | 0.089 | 0.28 |
| 21 | ಮಂಡ್ಯ | 86.99 | 0.54 | 0.2 |
| 22 | ಮೈಸೂರು | 43.25 | 1.38 | 2.12 |
| 23 | ರಾಯಚೂರು | 1.29 | 0.049 | 0.15 |
| 24 | ರಾಮನಗರ | 59.67 | 1.29 | 0.79 |
| 25 | ಶಿವಮೊಗ್ಗ | 19.74 | 0.79 | 0.75 |
| 26 | ತುಮಕೂರು | 59.98 | 0.92 | 2.15 |
| 27 | ಉಡುಪಿ | 9.96 | 0.086 | 0.53 |
| 28 | ಉತ್ತರಕನ್ನಡ | 3.19 | 0.031 | 0.021 |
| 29 | ವಿಜಯನಗರ | 8.56 | 0.38 | 0.39 |
| 30 | ವಿಜಯಪುರ | 4.04 | 0.069 | 0.033 |
| 31 | ಯಾದಗಿರಿ | 0.07 | 0.009 | 0.029 |
| | **ಒಟ್ಟು** | **613.58** | **18.293** | **24.202** |